# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 350
2. ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 07.12.2023
4. ಉತ್ತರಿಸಬೇಕಾದ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಮಂಡ್ಯ ಜಿಲ್ಲೆ ವಿಶ್ವೇಶ್ವರಯ್ಯ ನಾಲೆ. ಹುಲಿಕೆರೆ ಸುರಂಗ ಯೋಜನೆಯ ವಿಶೇಷತೆಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಹುಲಿಕೆರೆ ಗ್ರಾಮದ ಬಳಿ ವಿಶ್ವೇಶ್ವರಯ್ಯ ನಾಲೆಯ ಸರಪಳಿ 41.195 ಕಿ.ಮೀ ನಿಂದ 43.995 ಕಿ.ಮೀ ವರೆಗೆ 2.80 ಕಿ.ಮೀ ಉದ್ದದ ಸುರಂಗ ಮಾರ್ಗದ ಕಾಲುವೆಯನ್ನು ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣ ಮಾಡುವ ಸಂದರ್ಭದಲ್ಲಿ ನಿರ್ಮಾಣ ಮಾಡಲಾಗಿರುತ್ತದೆ. ಸುರಂಗವನ್ನು ಕೇವಲ ಮಾನವ ಶಕ್ತಿಯನ್ನು ಉಪಯೋಗಿಸಿಕೊಂಡು ನಿರ್ಮಿಸಿದ್ದು ಈ ಸುರಂಗದ ವಿಶೇಷತೆಯಾಗಿದೆ. |
| (ಆ) | ಸರ್ಕಾರ ಹುಲಿಕೆರೆ ಸುರಂಗದ ಯೋಜನೆಯ ಪುನಃಶ್ಚೇತನ ಕಾಮಗಾರಿಗೆ ಇದುವರೆವಿಗೂ ಮಾಡಿರುವ ವೆಚ್ಚ ಎಷ್ಟು; ಕೈಗೊಳ್ಳಲಾದ ಪುನಃಶ್ಚೇತನ ಕಾಮಗಾರಿಗಳು ವಿವರಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಹುಲಿಕೆರೆ ಸುರಂಗ ಮಾರ್ಗವನ್ನು ನಿರ್ಮಿಸಿದ ನಂತರ ಆಗಿದ್ದಾಂಗೆ ನಿರ್ವಹಣೆ ಮಾಡಲಾಗಿರುತ್ತದೆ. ಹುಲಿಕೆರೆ ಸುರಂಗದ ಸರಪಳಿ 2.06 ಕಿ.ಮೀ ನಲ್ಲಿ ಕುಸಿತ ಉಂಟಾಗಿದ್ದರಿಂದ 2014-15ನೇ ಸಾಲಿನಲ್ಲಿ ಸುರಂಗದ ಪುನಶ್ಚೇತನ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ರೂ.13.72 ಕೋಟಿ ವೆಚ್ಚ ಮಾಡಲಾಗಿರುತ್ತದೆ.<br><br>ಪುನಶ್ಚೇತನ ಕಾಮಗಾರಿ ಅಡಿಯಲ್ಲಿ 60.00 ಮೀ ಉದ್ದಕ್ಕೆ Permanent Structure ನಿರ್ಮಿಸಿ ಸುರಂಗ ಮಾರ್ಗದ Crown ಮೇಲ್ಭಾಗದಿಂದ ಭೂಮಟ್ಟದವರೆಗೆ ಮಣ್ಣು ಸುರಿದು ಸಮತಟ್ಟು ಮಾಡಿ ಬಲಪಡಿಸಲಾಗಿರುತ್ತದೆ ಹಾಗೂ ಸುರಂಗದ ಸರಪಳಿ 0.00 ಕಿ.ಮೀ ನಿಂದ 2.80 ಕಿ.ಮೀ ವರೆಗೆ Bed & Haunch ಲೈನಿಂಗ್ ಮತ್ತು 0.00 ಕಿ.ಮೀ ನಿಂದ 2.70 ಕಿ.ಮೀ ವರೆಗೆ ಸುರಂಗ ಮಾರ್ಗದ ಒಳಭಾಗದ 2 ಪಾರ್ಶ್ವಗಳಿಗೆ Shortcreting ಮಾಡಲಾಗಿರುತ್ತದೆ. ಸುರಂಗ ಮಾರ್ಗದ ಸರಪಳಿ 0.345 ಕಿ.ಮೀ., 0.815 ಕಿ.ಮೀ, 1.455 ಕಿ.ಮೀ ಮತ್ತು 1.888 ಕಿ.ಮೀ ಗಳಲ್ಲಿರುವ Vertical Shaft ದುರಸ್ತಿಗೊಳಿಸಲಾಗಿರುತ್ತದೆ. |
| (ಇ) | ಸುರಂಗ ಹಾದುಹೋಗಿರುವ ನಾಲೆಯ ಮೇಲ್ಭಾಗದಲ್ಲಿ ಇತ್ತೀಚಿನ ದಿನಗಳಲ್ಲಿ ಕುಸಿತವಾಗಿರುವುದರಿಂದ ಸ್ಥಳೀಯರು ಆತಂಕಕ್ಕೆ ಒಳಗಾಗಿದ್ದು, ಈ ಕುರಿತು ಕೈಗೊಂಡಿರುವ ಪರಿಹಾರ ಕ್ರಮಗಳೇನು; | ದಿನಾಂಕ:06.11.2023ರಂದು ಸುರಿದ ಮಳೆಯಿಂದಾಗಿ ಸುರಂಗದ ಸರಪಳಿ 2.516 ಕಿ.ಮೀ. ನಲ್ಲಿ ಭೂಕುಸಿತಗೊಂಡಿದ್ದು, ತಾತ್ಕಾಲಿಕ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಈ ಭಾಗದ ಕಟ್ಟಡಗಳ ಮಾಲೀಕರಿಗೆ ಸುರಕ್ಷಿತ ಸ್ಥಳಗಳಿಗೆ ತೆರಳಲು ತಿಳುವಳಿಕೆ ಪತ್ರ ನೀಡಲಾಗಿರುತ್ತದೆ. ಬೆಳೆದು ನಿಂತಿರುವ ಬೆಳೆಗಳಿಗೆ ನೀರನ್ನು ಹರಿಸಲಾಗುತ್ತಿದ್ದು, ನೀರು ನಿಲ್ಲಿಸಿದ ನಂತರ ಮಣ್ಣು ಕುಸಿದಿರುವ ಸ್ಥಳದಲ್ಲಿ ಶಾಶ್ವತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುವುದು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಈ) | ಸುರಂಗ ನಾಲೆ ಹಾದುಹೋಗಿರುವ ಮೇಲ್ಭಾಗದಲ್ಲಿ ಪದೇ ಪದೇ ಭೂಕುಸಿತ ಆಗುತ್ತಿರುವುದಕ್ಕೆ ಕಾರಣಗಳೇನು; ಈ ಪ್ರದೇಶ (ಸುರಂಗ ನಾಲೆ ಹಾದುಹೋಗಿರುವ ಮೇಲ್ಭಾಗ) ಸಂರಕ್ಷಿತವೇ; ಇದರ ಮೇಲಿನ ನಿರ್ಮಾಣಗಳು ಕೃಷಿ ಚಟುವಟಿಕೆಗಳು ಅನಧಿಕೃತವೇ; (ಸಂಪೂರ್ಣ ಮಾಹಿತಿ ನೀಡುವುದು) | ಈ ಸುರಂಗದ ಸರಪಳಿ 0.00 ಕಿ.ಮೀ ರಿಂದ 2.00 ಕಿ.ಮೀ ವರೆಗೆ ಮೇಲ್ಭಾಗದಲ್ಲಿ ಗಟ್ಟಿಕಲ್ಲು ಪದರಗಳಿದ್ದು, 2.00 ಕಿ.ಮೀ ರಿಂದ 2.80 ಕಿ.ಮೀ ವರೆಗೆ ಮೇಲ್ಭಾಗದಲ್ಲಿ ಮಣ್ಣಿನ ಪದರಗಳು ಇರುವುದರಿಂದ ಸುರಂಗ ನಾಲೆಯ ಮೇಲ್ಭಾಗದಲ್ಲಿ ಭೂಕುಸಿತವಾಗುತ್ತಿದೆ. ಸುರಂಗ ನಾಲೆಯ ಮೇಲ್ಭಾಗದ ಜಾಗದ ಸರ್ವೆ ಕಾರ್ಯ ಕೈಗೊಂಡು ನಿರ್ಮಾಣ ಮತ್ತು ಕೃಷಿ ಚಟುವಟಿಕೆಗಳು ಅನಧಿಕೃತವಾಗಿದ್ದಲ್ಲಿ ತೆರವುಗೊಳಿಸಲು ಕ್ರಮ ವಹಿಸಲಾಗುವುದು. |
| (ಉ) | ಈ ಯೋಜನೆಯ ಪ್ರಾರಂಭದಿಂದ ಇದುವರೆವಿಗೂ ಮಾಡಲಾದ ಕ್ರೋಢೀಕೃತ ವೆಚ್ಚ ಎಷ್ಟು; (ಪ್ರಾರಂಭ ಮತ್ತು ನಂತರದಲ್ಲಿ ಆಗಿರುವ ವೆಚ್ಚದ ಮಾಹಿತಿ ನೀಡುವುದು) | ಈ ನಾಲೆಯು ಸ್ವಾತಂತ್ರ್ಯ ಪೂರ್ವದಲ್ಲಿ ನಿರ್ಮಾಣವಾಗಿದ್ದು, ಪುನಶ್ಚೇತನ ಕಾಮಗಾರಿಯನ್ನು 2014-15ನೇ ಸಾಲಿನಲ್ಲಿ ಕೈಗೊಳ್ಳಲಾಗಿದ್ದು, ರೂ.13.72 ಕೋಟಿ ವೆಚ್ಚ ಮಾಡಲಾಗಿದೆ. |
| **(ಊ)** | ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣಕ್ಕೆ ಒದಗಿಸಿರುವ ಅನುದಾನವೆಷ್ಟು; ಆಗಿರುವ ವೆಚ್ಚ ಎಷ್ಟು? (ವರ್ಷವಾರು ಮಾಹಿತಿ ನೀಡುವುದು) | **ವಿಶ್ವೇಶ್ವರಯ್ಯ ಮುಖ್ಯ ನಾಲೆಯ ಸರಪಳಿ 0.00 ರಿಂದ 46.25 ಕಿ.ಮೀ ವರೆಗಿನ ಆಧುನೀಕರಣ ಕಾಮಗಾರಿಗೆ 2019-20ನೇ ಸಾಲಿನಲ್ಲಿ ರೂ.300.00 ಕೋಟಿ ಅನುದಾನವನ್ನು ಒದಗಿಸಲಾಗಿದ್ದು, ಈವರೆಗೆ ಒಟ್ಟು ರೂ.21.96 ಕೋಟಿ ವೆಚ್ಚ ಮಾಡಲಾಗಿರುತ್ತದೆ.** |

***ಸಂಖ್ಯೆ: ಜಸಂಇ 71 ಎನ್‌ಎಲ್‌ಎ 2023***

**( ಡಿ. ಕೆ. ಶಿವಕುಮಾರ್ )**
**ಉಪ ಮುಖ್ಯಮಂತ್ರಿಗಳು**